ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 11/2/2020

# ಕೇಳಿದ್ದೊಂದು ಸಿಕ್ಕಿದ್ದಿನ್ನೊಂದು!

## ಹೆಚ್ಚಿದ ಅಸಮಾಧಾನ | ಅತೃಪ್ತರ ಖಾತೆ ಅದಲು ಬದಲು ಸಾಧ್ಯತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಖಾತೆಗಳ ಹಂಚಿಕೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಒಂದೆರಡು ದಿನದಲ್ಲಿ ಸಿಎಂ ಬಿ.ಎಸ್. ಯಡಿಯೂರಪ್ಪ ಕೆಲ ಸಚಿವರ ಖಾತೆ ಬದಲಾವಣೆ ಮಾಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಡಾ.ಸುಧಾಕರ್‌ಗೆ ವೈದ್ಯಕೀಯ ಬದಲು ಇಂಧನ, ಬಿ.ಸಿ.ಪಾಟೀಲ್‌ಗೆ ಅರಣ್ಯ ಬದಲು ಕೃಷಿ ಕೊಡುವ ಸಾಧ್ಯತೆ ಇದೆ. ಶ್ರೀಮಂತ ಪಾಟೀಲ್‌ಗೆ ಸಕ್ಕರೆ, ಬೈರತಿ ಬಸವರಾಜು, ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರಿಗೆ ಹೆಚ್ಚುವರಿ ಖಾತೆ ಜವಾಬ್ದಾರಿ ಕೊಡುವ ಸಾಧ್ಯತೆ ಇದೆ.

ಆರೋಗ್ಯ ಖಾತೆ ಮೇಲೆ ಕಣ್ಣಿಟ್ಟಿದ್ದ ಡಾ. ಸುಧಾಕರ್‌ಗೆ ವೈದ್ಯಕೀಯ ಶಿಕ್ಷಣ ಒಲಿದಿದ್ದು, ಈ ಬಗ್ಗೆ ಸಿಎಂ ಜತೆ ಚರ್ಚಿಸುವುದಾಗಿ ಹೇಳುವ ಮೂಲಕ ಅಸಮಾಧಾನ ಹೊರಹಾಕಿದ್ದಾರೆ. ಬೈರತಿ ಬಸವರಾಜ್‌ಗೆ ನಗರಾಭಿವೃದ್ಧಿ ಖಾತೆ ನೀಡಿದರೂ, ಟೌನ್ ಪ್ಲಾನಿಂಗ್, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀಡಿಲ್ಲ. ಇದೊಂದು ರೀತಿ ಕೈಕಟ್ಟಿ ಹಾಕಿದಂತಾಗಿದೆ. ಕೆ.ಗೋಪಾಲಯ್ಯರಿಗೆ ಸಣ್ಣ ಕೈಗಾರಿಕೆ, ಸಕ್ಕರೆ ನೀಡಲಾಗಿದೆ. ಈ ಖಾತೆಯ ಮಹತ್ವದ ಬಗ್ಗೆ ಗೋಪಾಲಯ್ಯ ಆಪ್ತ ಬಳಗದಲ್ಲಿ ಚರ್ಚೆ ಶುರುವಾಗಿದೆ.


**ಅತ್ತ ಅದೂ ಇಲ್ಲ, ಇತ್ತ ಇದೂ ಇಲ್ಲ!:** ಗೃಹ ಖಾತೆ ಮೇಲೆ ಕಣ್ಣಿಟ್ಟಿದ್ದ ಬಿ.ಸಿ.ಪಾಟೀಲ್‌ಗೆ ಈ ಖಾತೆ ಕೊಡುವುದು ಕಷ್ಟ ಎಂದ ಕೂಡಲೆ, ಇಂಧನ ಕೊಟ್ಟರೂ ಪರವಾಗಿಲ್ಲ ಎಂದು ಸಿಎಂಗೆ ಮಾಹಿತಿ ನೀಡಿ ಬಂದಿದ್ದರು. ಇದರ ಬದಲಿಗೆ ಸಹಕಾರ ಖಾತೆ ನೀಡಲು ಸಿಎಂ ಮುಂದಾಗಿದ್ದರು. ಹಠಕ್ಕೆ ಬಿದ್ದ ಪಾಟೀಲ್, ಸಹಕಾರ ಖಾತೆ ಬೇಡವೇ ಬೇಡ ಎಂದು ಆಪ್ತರಿಂದ ಮಾಹಿತಿ ರವಾನಿಸುವ ಮೂಲಕ ಗೃಹ ಮತ್ತು ಇಂಧನ ಖಾತೆಗೆ ಪಟ್ಟು ಹಿಡಿದರು. ಕೊನೆ ಕ್ಷಣದ ಹೊತ್ತಿಗೆ ಸಹಕಾರ ಖಾತೆ ಸೋಮಶೇಖರ್ ಪಾಲಾಗಿ, ಅರಣ್ಯ ಖಾತೆ ಸಿಕ್ಕಿದ್ದು, ಒಲ್ಲದ ಮನಸ್ಸಿನಲ್ಲಿದ್ದಾರೆ. ಖಾತೆ ಬದಲಿಸಿಕೊಡಿ ಎಂದು ಬಿಎಸ್‌ವೈಗೆ ಅಲವತ್ತುಕೊಂಡಿದ್ದಾರೆ.

**ಕಾರ್ಮಿಕ ಇಲಾಖೆ ಸಣ್ಣ ಇಲಾಖೆಯಲ್ಲ. ಸದ್ಯಕ್ಕೆ ಇಲಾಖೆಯಲ್ಲಿ 7 ಸಾವಿರ ಕೋಟಿ ರೂ. ಇದೆ. ಕೇಂದ್ರ ಸರ್ಕಾರ ಶೇ.70 ಅನುದಾನ ಕೊಡುತ್ತವೆ.**

| ಶಿವರಾಮ ಹೆಬ್ಬಾರ ಕಾರ್ಮಿಕ ಸಚಿವ

## ಪ್ರಾದೇಶಿಕ ಅಸಮಾನತೆ





ವಿಜಯಪುರ: ಸಚಿವ ಸಂಪುಟದಲ್ಲಿ ಪ್ರಾದೇಶಿಕ ಅಸಮಾನತೆ ಆಗಿದ್ದು, ಅದನ್ನು ಸರಿಪಡಿಸಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ್ದಾರೆ. ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದು, ಸಂಪುಟ ಪುನಾರಚನೆಯಾದರೂ ಪರವಾಗಿಲ್ಲ, ಕೆಲ ಹಿರಿಯ ಸಚಿವರ ಹುದ್ದೆ ತ್ಯಾಗ ಮಾಡಿಸಿ. ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿರುವುದಾಗಿ ಸುದ್ದಿಗಾರರಿಗೆ ತಿಳಿಸಿದರು. ಉತ್ತರ ಕರ್ನಾಟಕವೇ ಬಿಜೆಪಿಗೆ ಮೂಲ. ಹೀಗಾಗಿ ಉ.ಕ.ದ ಎಲ್ಲ ಜಿಲ್ಲೆಗಳಿಗೂ ಒಂದೊಂದು ಸಚಿವ ಸ್ಥಾನ ಕೊಡಬೇಕು. ಎಲ್ಲವನ್ನೂ ಬೆಂಗಳೂರು, ಬೆಳಗಾವಿ ಯವರಿಗೆ ಕೊಟ್ಟರೆ ಎಷ್ಟು ಸರಿ ಎಂದು ಪ್ರಶ್ನಿಸಿದರು.

## ಮಹೇಶ್ ಕುಮಠಳ್ಳಿ ಅಸಮಾಧಾನ

ಎಂಎಸ್ಐಎಲ್ ಅಧ್ಯಕ್ಷ ಹುದ್ದೆ ನೀಡಿರುವ ಬಗ್ಗೆ ಶಾಸಕ ಮಹೇಶ್ ಕುಮಠಳ್ಳಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ವಿಜಯವಾಣಿಯೊಂದಿಗೆ ಮಾತನಾಡಿ, ನಾನು ಇಂಜಿನಿಯರ್ ಆಗಿರುವ ಕಾರಣ, ಲ್ಯಾಂಡ್ ಆರ್ಮಿ ಕೊಟ್ಟರೆ ನಿಭಾಯಿಸ ಬಹುದು. ಹೌಸಿಂಗ್ ಬೋರ್ಡ್ ಅಧ್ಯಕ್ಷ ಹುದ್ದೆ ಕೊಟ್ಟರೂ ಅಡ್ಡಿಯಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳನ್ನೇ ಭೇಟಿ ಮಾಡಿ ಚರ್ಚೆ ಮಾಡುವೆ ಎಂದರು.

## ಮುಂದಿನ ಗುರಿ ಸಿಎಂ ಸ್ಥಾನ

ಹುಕ್ಕೇರಿ: ಸಿಎಂ ಯಡಿಯೂರಪ್ಪ ಹಾಗೂ ನನ್ನ ಮಧ್ಯೆ ಯಾವುದೇ ಮುನಿಸು ಇಲ್ಲ. ಈಗಾಗಲೇ 40 ವರ್ಷದ ರಾಜಕೀಯ ಜೀವನದಲ್ಲಿ 13 ವರ್ಷ ಸಚಿವನಾಗಿ



ಕರ್ತವ್ಯ ನಿಭಾಯಿಸಿದ್ದೇನೆ. ನನ್ನ ಮುಂದಿನ ಗುರಿ ಮುಖ್ಯಮಂತ್ರಿ ಸ್ಥಾನ ಎಂದು ಶಾಸಕ ಉಮೇಶ ಕತ್ತಿ ಹೇಳಿದ್ದಾರೆ. ಸಚಿವ ಸ್ಥಾನ ನೀಡಿಲ್ಲ ಎಂಬ ಕಾರಣಕ್ಕೆ ಸಿಎಂ ಹಾಗೂ ಹೈಕಮಾಂಡ್ ಮೇಲೆ ಸಿಟ್ಟಿಲ್ಲ. 8 ಬಾರಿ ಶಾಸಕನಾಗಿ ಆಯ್ಕೆಯಾದ ಹಿರಿಯ ರಾಜಕಾರಣಿಯಾಗಿದ್ದರೂ ನನ್ನ ನಸೀಬಿನಲ್ಲಿ ಈ ಬಾರಿ ಅದು ಇಲ್ಲವೆಂದು ಭಾವಿಸಿದ್ದೇನೆ ಎಂದು ಸುದ್ದಿಗಾರರಿಗೆ ತಿಳಿಸಿದರು. ಇನ್ನೂ 10 ವರ್ಷ ರಾಜಕೀಯ ಜೀವನದಲ್ಲಿ ಮುಂದುವರಿಯುವೆ. ಅಷ್ಟರೊಳಗಾಗಿ ಹಿರಿತನ, ಅನುಭವ, ಕ್ಷೇತ್ರದ ಹಿತೈಷಿಗಳ ಆಶೀರ್ವಾದದ ಬಲದಿಂದ ಸಿಎಂ ಆಗಬಹುದೆಂಬ ಆಶಾವಾದವಿದೆ ಎಂದರು.

## ಎಸ್ಕಾರ್ಟ್ ಕೊಡುತ್ತಿದ್ದ ಪಾಟೀಲ್‌ಗೆ ಎಸ್ಕಾರ್ಟ್ಸ್ ಭಾಗ್ಯ!



ಹಾವೇರಿ: ಅನೇಕ ಸಚಿವರು ಹಾಗೂ ಗಣ್ಯಮಾನ್ಯರಿಗೆ ಎಸ್ಕಾರ್ಟ್ ಕೊಡುತ್ತಿದ್ದ ವ್ಯಕ್ತಿ ಈಗ ತಾವೇ ಎಸ್ಕಾರ್ಟ್ಸ್ ಸೌಲಭ್ಯ ಪಡೆದುಕೊಳ್ಳಲಿದ್ದಾರೆ! ಇದು ಬಿ.ಸಿ.ಪಾಟೀಲ್ ಹೆಗ್ಗಳಿಕೆ. ಈಚೆಗೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಬಿಸಿಪಿಗೆ ಅರಣ್ಯ ಖಾತೆ ದೊರೆತಿದೆ. 23 ವರ್ಷಗಳ ಪೊಲೀಸ್ ಸೇವಾ ಅವಧಿಯಲ್ಲಿ ರಾಜ್ಯದ ಅನೇಕ ಸಚಿವರು, ವಿಐಪಿ, ವಿವಿಐಪಿಗಳಿಗೆ ಎಸ್ಕಾರ್ಟ್ ಒದಗಿಸಿದ್ದ ಪಾಟೀಲ್ ಈಗ ಸರ್ಕಾರದಿಂದ ಎಸ್ಕಾರ್ಟ್ಸ್ ಸೌಲಭ್ಯ ಒದಗಿಸಲಾಗಿದೆ. 1980ರಲ್ಲಿ ಕುರುಗೋಡ ಠಾಣೆಯಲ್ಲಿ ಪಿಎಸ್ಐ ಆಗಿ ಸೇವೆ ಆರಂಭಿಸಿ, ನಂತರ ದಾವಣಗೆರೆ, ಹಿರಿಯೂರನಲ್ಲಿ ಟ್ರಾಫಿಕ್ ಪಿಎಸ್ಐ ಆಗಿ ಕಾರ್ಯನಿರ್ವಹಿಸಿದ್ದಾರೆ. ಸಿಪಿಐ ಆಗಿ ಬಡ್ತಿ ಪಡೆದು ಗುಪ್ತಚರ ಇಲಾಖೆ, ಯಶವಂತಪುರ ಹಾಗೂ ಬೆಂಗಳೂರು ವಿಮಾನ ನಿಲ್ದಾಣ ಠಾಣೆಯಲ್ಲೂ ಸೇವೆ ಸಲ್ಲಿಸಿದ್ದಾರೆ. 2003ರಲ್ಲಿ ಸ್ವಯಂ ನಿವೃತ್ತಿ ಪಡೆದರು. ಪೊಲೀಸ್ ಅಧಿಕಾರಿಯಾಗಿದ್ದಾಗ ಸೆಲ್ಯೂಟ್ ಮಾಡುತ್ತಿದ್ದ ಬಿಸಿಪಿಗೆ ಇಂದು ಹಿರಿಯ ಪೊಲೀಸ್ ಅಧಿಕಾರಿಗಳೂ ಸೆಲ್ಯೂಟ್ ಮಾಡಲಿದ್ದಾರೆ.

## ಯಾರಿಗೆ ಯಾವ ಖಾತೆ

1. ಬಿ.ಎಸ್.ಯಡಿಯೂರಪ್ಪ ಡಿಪಿಎಆರ್, ಹಣಕಾಸು, ಇಂಧನ, ಬೆಂಗಳೂರು ಅಭಿವೃದ್ಧಿ, ಗುಪ್ತದಳ, ಯೋಜನೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಹಂಚಿಕೆಯಾಗದೆ ಉಳಿದ ಖಾತೆಗಳು
2. ಗೋವಿಂದ ಕಾರಜೋಳ ಲೋಕೋಪಯೋಗಿ, ಸಮಾಜ ಕಲ್ಯಾಣ (ಹೆಚ್ಚುವರಿ)
3. ಡಾ.ಸಿ.ಎನ್.ಅಶ್ವತ್ಥನಾರಾಯಣ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ತಂತ್ರಜ್ಞಾನ, ಹೆಚ್ಚುವರಿಯಾಗಿ ಕೌಶಲಾಭಿವೃದ್ಧಿ
4. ಲಕ್ಷ್ಮಣ ಸವದಿ ಸಾರಿಗೆ
5. ಕೆ.ಎಸ್.ಈಶ್ವರಪ್ಪ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್
6. ಆರ್.ಅಶೋಕ್ ಕಂದಾಯ
7. ಜಗದೀಶ ಶೆಟ್ಟರ್ ಭಾರಿ ಮತ್ತು ಮಧ್ಯಮ ಕೈಗಾರಿಕೆ, ಹೆಚ್ಚುವರಿಯಾಗಿ ಸಾರ್ವಜನಿಕ ಉದ್ದಿಮೆ
8. ಬಿ.ಶ್ರೀರಾಮುಲು: ಆರೋಗ್ಯ, ಹೆಚ್ಚುವರಿಯಾಗಿ ಹಿಂದುಳಿದ ವರ್ಗಗಳ ಕಲ್ಯಾಣ
9. ಎಸ್.ಸುರೇಶ್‌ಕುಮಾರ್ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಕಾಲ
10. ವಿ.ಸೋಮಣ್ಣ ವಸತಿ
11. ಸಿ.ಟಿ.ರವಿ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಹೆಚ್ಚುವರಿಯಾಗಿ ಯುವಜನ ಸೇವೆ
12. ಕೋಟ ಶ್ರೀನಿವಾಸ ಪೂಜಾರಿ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ
13. ಬಸವರಾಜ ಬೊಮ್ಮಾಯಿ ಗೃಹ, ಹೆಚ್ಚುವರಿಯಾಗಿ ಕೃಷಿ
14. ಜೆ.ಸಿ.ಮಾಧುಸ್ವಾಮಿ ಕಾನೂನು ಮತ್ತು ಸಂಸದೀಯ ವ್ಯವಹಾರ, ಹೆಚ್ಚುವರಿಯಾಗಿ ಸಣ್ಣ ನೀರಾವರಿ
15. ಸಿ.ಸಿ.ಪಾಟೀಲ್ ಗಣಿ ಮತ್ತು ಭೂ ವಿಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ
16. ಪ್ರಭು ಚವ್ಹಾಣ್ ಪಶು ಸಂಗೋಪನೆ, ಹೆಚ್ಚುವರಿಯಾಗಿ ಅಲ್ಪಸಂಖ್ಯಾತ ಕಲ್ಯಾಣ, ಹಜ್ ಮತ್ತು ವಕ್ಫ್
17. ಶಶಿಕಲಾ ಜೊಲ್ಲೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ
18. ಎಚ್.ನಾಗೇಶ್ ಅಬಕಾರಿ